ಒಳಗೆ ಮಕ್ಕಳು ಸಣ್ಣಗೆ ಪಿಸುಗುಡ್ತಿವೆ. ಹಾಸಿಗೆಯಲ್ಲಿ ಎದ್ದು ಕುಳಿತುಕೊಂಡರೂ ಸೊಂಟದ ಚಿಪ್ಪಿನ ಅಸಾಧ್ಯ ನೋವಿಗೆ ತತ್ತರಿಸುವ ಅವ್ವ ಔಷಧಿ ತಗಂಡಿಲ್ಲ. ಅಪ್ಪನ ಬಿ.ಪಿ. ಗುಳಿಗೆ... ಶಂಕರಿ ಮುಖ ತೊಳೆದು, ದೇವರಿಗೆ ದೀಪ ಹಚ್ಚಿ, ಚಾ ಕುಡ್ಯೊಣ ಬನ್ರಿ ಅಂತ ಎಲ್ಲರಿಗೂ ಅವಲಕ್ಕಿ–ಚಾ ಕೊಟ್ಟಳು. ಆವತ್ತೂ ಗಂಡನ ಹೆಣ ಈ ಹಜಾರದಾಗ ಮಲಗಿಸಿದ ದಿನ, ಸಂಬಂಧಿಕರು ಬಂದು ತಲುಪೋ ಮುಂಚೆ, ಅಪ್ಪನಿಗೆ ಚಾ ಕಾಸಿಕೊಟ್ಟು ಗುಳಿಗೆ ನುಂಗಿಸಿದ್ದು ನೆನಪಾಯಿತು.

ಯಾಕೆ ಇವತ್ತು ಅಂವ ಮತ್ತೆ ಮತ್ತೆ ನೆನಪಾಗ್ತಿದಾನೆ? ಅವನೊಬ್ಬ ಸರೀಗಿದ್ದಿದ್ರೆ ನಾನು ನನ್ನ ಮಕ್ಳು ಈ ಕುದಿಯನ್ನು ಅನುಭವಿಸ್ತಿರಲಿಲ್ಲ ಅಂತಲೇ? ಅಥವಾ ಇನ್ನೆಂದೂ ಈ ಮನಿಯೊಳಗೆ ಕಾಲಿಡದ್ಹಾಂಗ ಆದ್ಮೇಲೆ, ಈ ಮನಿಯೊಟ್ಟಿಗೆ ಅವನ ನೆನಪಿನ ಚುಂಗನ್ನೂ ಇಲ್ಲೇ ಬಿಟ್ಟು ಹೋಗ್ತೀನಿ ಅಂತಲೇ? ಇಲ್ಲ. ಯಾವುದೂ ಹಾಗೆ ಬಿಟ್ಟುಹೋಗುವುದಿಲ್ಲ. ನಾನಿರುವವರೆಗೆ ಈ ಎಲ್ಲ ಭಾರ ಹೊರಬೇಕು. ಉಸಿರಲ್ಲಿ ನೇದು ಹೋದ ನೆನಪುಗಳಿವು. ಈ ಮನಿ... ಈ ಮನೀನ್ನ ಶಂಕರಿ ಪ್ರೀತಿಸಿದಷ್ಟು ಬ್ಯಾರೆ ಯಾರಂದ್ರ ಯಾರೂ ಪ್ರೀತಿಸಿರಲಾರ್ರು. ಅಪ್ಪ ಪೆನ್‌ಶನ್ ಆದ್ರೂ ಮನಿ ಅಂತ ಒಂದನ್ನ ಕಟ್ಟಿಸ್ಕಳಾಕೆ ಆಗಿರಲಿಲ್ಲ. ಮಕ್ಳೂ ಮಕ್ಳೂ ಅಂತ ಒದ್ದಾಡೂದ ಆಗಿತ್ತು. ಧಾರವಾಡದಾಗ ಮಗ ಓದೂ ಕಾಲದಿಂದ್ಲೂ ಬಾಡಿಗೆ ಮನಿ ಹಿಡ್ದ. ಹೆಣ್ಮಕ್ಕಳ ಮದ್ವಿ ಸಡಗರಾ ಆಮನೀಲೇ. 'ಮನೀ, ಅಂತಸ್ತಿನ ಮನಿ ಮಕ್ಳ ಕಟ್ಟಿಸ್ಲಿ. ನಂಗ ಈಕೀಗಿ ಒಂದು ಖೋಲಿ ಸಾಕ್ ಹ ಹಾ' ಅಂತ ನಕ್ಕಾಂವ. ಅಪ್ಪನಿಗೊಂದು ಸ್ವಂತ ಮನಿ ಕನಸಿತ್ತಾ? ಗೊತ್ತಿರಲಿಲ್ಲ. ಗೊತ್ತು ಮಾಡಿಕೊಳ್ಳೋ ಸಂದರ್ಭಾನೂ ನಮ್ಮ ಪಡಿಪಾಟ್ಲಲ್ಲಿ ಒದಗಲಿಲ್ಲ. ಆದ್ರೆ ಪ್ರದೀಪ... ನಾನs ಎಣ್ಣೀ ಹಚ್ಚಿ ಎರೀತಿದ್ದ ಹುಡುಗ. ನಾ ಸಣ್ಣಾಕಿದ್ದಾಗ ಅವ್ವ, 'ಶಾಂಕ್ರಿ ಮಗ ಎತ್ತಾಗ್ಲೊಳ್ತು ನೋಡು' ಅಂತ ಹಗಲಿಡೀ ಅಂವ್ನ ಬೆನ್ನಿಗೆ ನನ್ನ ದಬ್ಬತಿದ್ಲು. ಆಗಿಂದ್ಲೂ ಅಂವ ಯಾರಿಗೆ ಮಗ? ಅವ್ವಗೋ ನಂಗೋ? ತಿಳಿಲಾರದ್ಹಾಂಗ ಅವನನ್ನ ಹಚ್ಚಿಕೊಂಡಿದ್ದೆ. ಅವನೂ ಅವ್ವನಿಗಿಂತ ಹೆಚ್ಚು ನನ್ನ ಆತುಕೊಂಡು ಬೆಳದ. ಅಂವ ಬೆಳ್ದು ಓದಿ ದೊಡ್ಡಾಂವಾಗಿ ಪುಣೇಲಿ ಎಂಜಿನಿಯರ್ ಆಗಿ ಜಬರ್ದಸ್ತ್ ಮದ್ವಿ ಆಗಿ... ಎಲ್ಲ ಹೊತ್ನಲ್ಲೂ ಸೋಮೇಶ್ವರಂಗೆ ತುಪ್ಪದ ದೀಪ ಹಚ್ಚಿದ್ದು ನಾನು. ಅಂವ ನನ್ನ ಬಿಟ್ಟು ಇದ್ದಿರಾಕಿಲ್ಲ. 'ಅಕ್ಕಯ್ಯ, ಹುಡ್ಗಿ ನಿನ್ಗ ಪಸಂದದಾಳೋ ಹ್ಯಾಂಗ?' ಅಂತ ಮದ್ವಿ ಗಟ್ಟಿ ಮಾಡೋ ಮುಂಚೆ ನನ್ನೇ ಪ್ರತ್ಯೇಕ ಕೇಳಿದ್ದ. ಮದ್ವಿ ಮಾಡ್ಕೊಂಡವಳಿಗೆ, ನಮ್ಮಕ್ಕ ಭಾಳ ಅನುಭವಿಸ್ಯಾಳ ಗೌರಾ, ಆಕಿ ಕಣ್ಣಾಗ ನೀರ ತರಸ್ಬಾರ್ದು – ಅಂದವ. ಆಗೆಲ್ಲ ನನ್ನಪಾಲಿಗೆ ಸೋಮೇಶ್ವರ ಒಂದ ಕಿತ್ತಹಾಕಿದ್ರೂ ಇನ್ನೊಂದ್ಕಡೆ ಭಾರ ಸಂಭಾಳಿಸ್ಯಾನ – ಅನ್ನೋತಿದ್ದೆ. ಅಪ್ಪ ಅವ್ವಗ ಅಂತ ಪ್ರದೀಪ ಧಾರವಾಡದಾಗ ಈ ಹಳೀಮನಿ ಖರೀದಿ ಹಿಡ್ದ ಕೊಟ್ಟ. ಭಾಳ ವರ್ಷದಿಂದ ಬೀಗ ಜಡಿಸಿಕೊಂಡು, ದಾತಾರರಿಲ್ಲದ್ಹಾಂಗ ಅಲ್ಲಲ್ಲಿ ಸಿಮೆಂಟಿನ ಗ್ವಾಡೀನೂ ಸುಲಿದ ಸಿಪ್ಪೇಗತೇ ಕಿತ್ ಕಿತ್ ಬರ್ತಿದ್ದ ಮನಿ. ಆರ್.ಸಿ.ಸಿ. ಚಾವಣಿ ಮ್ಯಾಗ ಕರ್ರಗಿನ ಡಾಂಬರ ಕಲಸಿ ಮೆತ್ತ್ಯಾರೇನೋ ಅನ್ನೋವಷ್ಟು ಹೊಲಸು. ಆದ್ರ ಅದು ನನ್ನ ಮನಿ ಅದನ್ನ ನಾ ಅದೆಷ್ಟ್ ಪ್ರೀತಿಸ್ದೆ. ನಂಗೇನೂ ಹ್ವಾರೆ ಕಡಿಮಿ ಇರ್ತಿರಾಕಿಲ್ಲ. ಅವ್ವನ ದೇಕರೇಕಿ, ಸಾಲಿ, ಕಾಲೇಜಿನ ಮಕ್ಕಳ ಡಬ್ಬಿ, ಕಸ ಮುಸರಿ ಬಟ್ಟಿ ಯಾವ್ದಕ್ಕೂ ನನ್ನ ಕೈ ಅಗಲಿಸಲಿಲ್ಲ. ಅಪ್ಪನ ಪೆನಶನ್ನಾಗ ಇಷ್ಟೂ ಮಂದಿ ಬೇಕು–ಬ್ಯಾಡ ನೀಗಸ್ಬೇಕು. ಊರಾಗಿಂದ 8–10 ಚೀಲ ಜ್ವಾಳ ಬಂದರೆಷ್ಟೋ ಬಿಟ್ಟರೆಷ್ಟೋ. ಒಂದಿನಕಾರೂ, ಒಂದಿಂಕರ ಬ್ಯಾಸರ ಮಾಡಿಲ್ಲ ನಾ. ಅದ್ಕ ಅಪ್ಪ, 'ಶಾಂಕರಿ ಗಂಡ ಮಗಾ ಕಣವ್ವ ನೀ' ಅಂತಿದ್ದ. ಪುಂಡಿಪಲ್ಲೆ ಕಾರಬ್ಯಾಳಿ ರೊಟ್ಟಿ ಹಚ್ಚಿಕೊಟ್ಟ ದಿನ ಅವ್ವನ ಮಂಚದ ಹತ್ರ ಕುರ್ಚಿ ಎಳಕೊಂಡು, ಒಂದಿನಾನಾರ ನೀ ಹಿಂಗ ಮಾಡಿಯೇನು– ಅಂತ ರೇಗಿಸ್ತಿದ್ದ.

ಈ ಮನಿ, ನಾ ಎಷ್ಟ ಜ್ವಾಪಾನ ಮಾಡಿದ್ರೂ ತಾಳಲಿಲ್ಲ. ಅತ್ತಾಗ ಮೂಲಿ ಕುಸೀತದ ಅನ್ನಿಸಿ ಅಪ್ಪ ಪ್ರದೀಪನ ಕಿವಿ ಮ್ಯಾಲ ಹಾಕಿದ. ಪ್ರದೀಪ ಪೂರಾ ರಿಪೇರಿ ಮಾಡಿಸೇ ಬಿಡೂಣ ಅಂತ ಕೈ ಹಚ್ಚಿದ. ಎಲ್ಲ